ಸಾಕ್ಷಿದಾರನನ್ನು ಕರೆಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 31.10.2022.

**ಪಾಟೀ ಸವಾಲು – ಪ್ರತಿವಾದಿ ಪರ ಶ್ರೀ ಸಿ. ಎನ್. ಪಿ. ವಕೀಲರಿಂದ.**

1) 1 ನೇ ವಾದಿಗೆ ನಾವು ಆರು ಜನ ಹೆಣ್ಣು ಮಕ್ಕಳು ಮತ್ತು ಓರ್ವ ಗಂಡು ಮಗ ಇರುತ್ತಾನೆ. ಸದರಿ ಗಂಡು ಮಗನ ಹೆಸರು ವರ್ದಮಾನ ಇರುತ್ತದೆ. ಆತನು ಮದುವೆಯಾಗಿದ್ದು, ಆತನ ಹೆಂಡತಿ ಹೆಸರು ಲಲಿತಾ ಇರುತ್ತದೆ. 2012 ನೇ ಸಾಲಿನಲ್ಲಿ ಇದೇ ನ್ಯಾಯಾಲಯದಲ್ಲಿ ನಾನು ಪಾಲು ವಿಭಾಗ ಕೋರಿ ಅಸಲು ದಾವೆ ಸಂಖ್ಯೆ 03/2012 ನ್ನು ಹಾಜರುಪಡಿಸಿದ್ದೆನು ಎಂದರೆ ಸರಿ. ಸದರಿ ಅಸಲು ದಾವೆ ಸಂಖ್ಯೆ 03/2012 ರಲ್ಲಿ ನನ್ನ ಸಹೋದರರಾದ ವರ್ಧಮಾನ ಮತ್ತು ಆತನ ಹೆಂಡತಿಯನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ವರ್ಧಮಾನನಿಗೂ ಸಹ ನಮ್ಮ ಆಸ್ತಿಯಲ್ಲಿ ಹಿಸ್ಸೆ ಇರುತ್ತದೆ ಎಂದು ಸಾಕ್ಷ್ಯನುಡಿಯುತ್ತಾರೆ.

2) ದಿಃ 24.12.1999 ರಂದು ಪ್ರತಿವಾದಿಯ ತಂದೆಯಾದ ಹನುಮಂತಪ್ಪ ತಿರುಕಪ್ಪ ಕರಿಯಮ್ಮನಪೂಜಾರ ಇವರಿಗೆ ರೂಪಾಯಿ 71,000/– ಗಳಿಗೆ ಬ್ಯಾಡಗಿ ತಾಲೂಕು ಕಳಗೊಂಡ ಗ್ರಾಮದ ರಿ. ಸ. ನಂಃ 128/2 ಎ ವಿಸ್ತೀರ್ಣ 4 ಎಕರೆ 8 ಗುಂಟೆ ನೇದ್ದರ ಪೈಕಿ ಪೂರ್ವ ಭಾಗದ ಒಂದು ಎಕರೆ ಜಮೀನನ್ನು ನಮ್ಮ ಸಹೋದರನಾದ ವರ್ಧಮಾನ ಇವನು ಸಂಚಗಾರ ಪತ್ರವನ್ನು ಮಾಡಿಕೊಟ್ಟಿರುತ್ತಾನೆ ಎಂದರೆ ಅದು ಸುಳ್ಳು .

3) ಹಾಗೆ 1999 ನೇ ಸಾಲಿನಲ್ಲಿ ನಮ್ಮ ಸಹೋದರ ಪ್ರತಿವಾದಿಯ ತಂದೆಗೆ ಸದರಿ ಜಮೀನಿಗೆ ಸಂಬಂಧಪಟ್ಟಂತೆ ಬರೆದುಕೊಟ್ಟ ಸಂಚಗಾರ ಪತ್ರದ ವಿಷಯವು ನಮಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಹೀಗೆ ದಿಃ 28.07.2005 ರಂದು ಬ್ಯಾಡಗಿ ತಾಲೂಕು ಕಳಗೊಂಡ ಗ್ರಾಮದ ಹಿರಿಯರ ಸಮಕ್ಷಮ ಸದರಿ ಸಂಚಗಾರ ಪತ್ರದ ಬಗ್ಗೆ ರಾಜೀ ಪಂಚಾಯತಿಕೆ ಮಾಡುವ ಸಮಯದಲ್ಲಿ ನನ್ನ ತಾಯಿ 1 ನೇ ವಾದಿಯು 16,000/– ರೂಪಾಯಿ ಹೆಚ್ಚುವರಿ ಹಣವನ್ನು ಪ್ರತಿವಾದಿಯುರಿಂದ ಕೇಳಿದ್ದು, ಆ ಪ್ರಕಾರ ಪ್ರತಿವಾದಿಯು 1 ನೇ ವಾದಿಗೆ 16,000/– ರೂಪಾಯಿಗಳನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

4) ದಿಃ 24.12.1999 ರಂದು ಪ್ರತಿವಾದಿಯ ತಂದೆಗೆ 1 ಎಕರೆ ವಿಸ್ತೀರ್ಣದ ಜಮೀನಿಗೆ ಸಂಚಗಾರ ಪತ್ರ ಬರೆದುಕೊಟ್ಟ ದಿನದಂದೇ ಸದರಿ ಆಸ್ತಿಯ ಕಬ್ಜೆಯನ್ನು 1 ನೇ ಪ್ರತಿವಾದಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. 1999 ನೇ ಸಾಲಿನಿಂದ ಇಂದಿನವರೆಗೂ ಪ್ರತಿವಾದಿಯ ತಂದೆ ತನ್ನ ಜೀವಿತ ಅವಧಿಯಲ್ಲಿ ಹಾಗೂ ನಂತರ ಪ್ರತಿವಾದಿಯು ದಾವಾ ಆಸ್ತಿಯ ಸ್ವಾಧೀನ ಹೊಂದಿ ವಹಿವಾಟು ಉಪಭೋಗ ಮಾಡಿಕೊಂಡು ಬರುತ್ತಿದ್ದು, ಅದರಲ್ಲಿ ಸಾಗು ಮಾಡಿಕೊಂಡು ಬರುತ್ತಿದ್ದಾನೆ ಎಂದರೆ ಸರಿಯಲ್ಲ.

5) ದರಿ ಕಳಗೊಂಡ ಗ್ರಾಮದ ರಿ. ಸ. ನಂಃ 128/2 ಎ ವಿಸ್ತೀರ್ಣ 4 ಎಕರೆ 8 ಗುಂಟೆ ನೇದ್ದರ ಪೈಕಿ ಪಶ್ಚಿಮ ಭಾಗದ 3 ಎಕರೆ 8 ಗುಂಟೆ ಜಮೀನನ್ನು ಮಾತ್ರ ನಾವು ವಹಿವಾಟು

ಉಪಭೋಗ ಮಾಡುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ. ಪೂರ್ತಿ 4 ಎಕರೆ 8 ಗುಂಟೆ ವಿಸ್ತೀರ್ಣದ ಜಮೀನನ್ನು ನಾವೇ ಸಂಪೂರ್ಣ ಸ್ವಾಧೀನ ಹೊಂದಿ ವಹಿವಾಟು ಉಪಭೋಗ ಮಾಡುತ್ತಾ ಇದ್ದು, ಅದರಲ್ಲಿ ಸಾಗು ಮಾಡುತ್ತಾ ಇದ್ದೇವೆ.

6) ನನ್ನ ವಾದ ಪತ್ರ ಪ್ಯಾರಾ ನಂಬರ 5 ರಲ್ಲಿ ದಿಃ 02-01-2017 ರಂದು ತಮ್ಮ ಗ್ರಾಮದ ಹಿತೈಷಿಗಳು ಹಾಗೂ ಹಿರಿಯರ ಸಮಕ್ಷಮ ಪ್ರತಿವಾದಿಯನ್ನು ಕರೆಯಿಸಿ ನಮ್ಮ ದಾವಾ ಶೆಡ್ಯೂಲ್ ಆಸ್ತಿಯ ವಹಿವಾಟಿಗೆ ಹರಕತ್ತು ಮಾಡದಂತೆ ಬುದ್ದಿವಾದ ಹೇಳಿರುತ್ತೇವೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ಸೇರಿದ್ದ ಪಂಚರು ವ ಹಿರಿಯರ ಹೆಸರು ನನಗೆ ಗೊತ್ತಿಲ್ಲ. ದಿಃ 02-01-2017 ರಂದು ಪಂಚಾಯತಿಯಲ್ಲಿ ಆದ ನಿರ್ಣಯ ಮತ್ತು ಮಾತುಕತೆ ಏನು ನಡೆದಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ನಾನಾ ಅಲ್ಲಿಗೆ ಬರುವಷ್ಟರಲ್ಲಿ ಪಂಚಾಯತಿಕೆ ಮುಗಿದಿದ್ದು, ಏನು ನಿರ್ಣಯ ಕೈಗೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಆಧರಿಸುವಂತೆ ಆ ದಿವಸ ಯಾವುದೇ ಪಂಚಾಯತ ನಡೆದಿರುವುದಿಲ್ಲ ಎಂದರೆ ಸರಿ.

7) ದಾವಾ ಆಸ್ತಿಯ ಪಹಣಿ ಪತ್ರವು ಇಂದಿಗೂ ನನ್ನ ಸಹೋದರ ವರ್ಧಮಾನನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನನ್ನ ಸ್ವಂತ ಅಣ್ಣ ವರ್ಧಮಾನ ಕಾಣೇ ಆದ ಬಗ್ಗೆ ಪೋಲೀಸರಿಗೆ ನೀಡಿದ ದೂರಿನ ಪ್ರತಿಯನ್ನು ನಾನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅಸಲು ದಾವೆ ಸಂಖ್ಯೆ 3/2012 ರಲ್ಲಿ ನನ್ನ ಸಹೋದರ ವರ್ಧಮಾನನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನನ್ನ ಸಹೋದರ ವರ್ಧಮಾನನು ಜೀವಂತ ಇರುವುದಿಲ್ಲ ಎಂದು ಯಾವುದೇ ಡಿಕ್ರಿಯನ್ನು ನ್ಯಾಯಾಲಯದಿಂದ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಸದರಿ ವರ್ದಮಾನನ ಹೆಸರಿನಲ್ಲಿ ದಾವಾ ಆಸ್ತಿ ಇರುವುದರಿಂದ ಆತ ನಮ್ಮ ಸಹೋದರನಾಗಿದ್ದು, ಆತನನ್ನು ಈ ದಾವಾಯಲ್ಲಿ ಅವಶ್ಯಕ ಪಕ್ಷಗಾರರನ್ನಾಗಿ ಮಾಡದೇ ಇರುವುದರಿಂದ ಈ ದಾವೆ ಊರ್ಜಿತವಾಗುವುದಿಲ್ಲ .

8) ನನ್ನ ಸಹೋದರ ವರ್ಧಮಾನನು ಸಂಚಗಾರ ಪತ್ರ ಮಾಡಿಕೊಟ್ಟ ಬಗ್ಗೆ ಸದರಿ ಸಂಚಗಾರ ಪತ್ರದಂತೆ ಪ್ರತಿವಾದಿಯು ಇಂದಿಗೂ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದರೂ ಸಹಿತ ಆತನ ಕಬ್ಜಾವನ್ನು ತಪ್ಪಿಸುವ ಉದ್ದೇಶದಿಂದ ಮತ್ತು ಆತನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/-

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.